ಶ್ರೀ ಎ.ಕೆ. ಆನಂತಕೃಷ್ಣ:– ನನಗಂತೂ ಈ ರೀತಿಯ ಉತ್ತರವನ್ನು ತಾವು ಕೊಡಬಾರದು ಎಂದು ನಾನಂತೂ ಹೇಳುತ್ತೇನೆ.

ಕರಾವಳಿ ಪ್ರದೇಶದಲ್ಲಿ ಹೂಳೆತ್ತುವುದರ ಬಗ್ಗೆ

413 (1112): ಶ್ರೀ ವಿಜಯ ಕುಮಾರ ಶೆಟ್ಟಿ (ಸುರತ್ಕಲ್):–

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕರಾವಳಿಯಲ್ಲಿ ಹೂಳೆತ್ತದೆ ಇರುವ ಅಳಿವೆ ದ್ವಾರಗಳಲ್ಲಿ ಮೀನುಗಾರರು ಅಪಾಯಕ್ಕೀಡಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕಾಗಿ ಡ್ರೆಡ್ಜಿಂಗ್ ಕೈಗೊಳ್ಳಲು ಸರ್ಕಾರವು 1992-93ರಲ್ಲಿ ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣವೆಷ್ಟು;

ಇ) ನವಮಂಗಳೂರು ನಿರ್ಮಾಣ ಸಂದರ್ಭದಲ್ಲಿ ಆಶ್ವಾಸನೆ ನೀಡಿದಂತೆ ಮೀನುಗಾರರಿಗೆ ಪ್ರತ್ಯೇಕ ಕೆಟ್ಟಿ ನಿರ್ಮಿಸುವ ಕಾರ್ಯದತ್ತ ಕೈಗೊಂಡ ಕ್ರಮಗಳೇನು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):–

ಅ) ಹೌದು.

ಆ) ರೂ. 2.65 ಕೋಟಿ ಮೀನುಗಾರಿಕೆ ಇಲಾಖೆಯಲ್ಲಿ ಮೀಸಲಿಟ್ಟಿತ್ತು. ಆದರೆ ಅಲ್ಲಿ ತಡೆಗೋಡೆ ನಿರ್ಮಾಣದ ಕಾರ್ಯ ಸ್ಥಗಿತವಾಗಿರುವುದರಿಂದ ಅಳಿವೆಯಲ್ಲಿ ಹೂಳೆತ್ತುವಿಕೆ ಮಾಡಲಿಲ್ಲವಾದ್ದರಿಂದ ಇಣ ಖರ್ಚಾಗಲಿಲ್ಲ.

ಇ) ನವಮಂಗಳೂರು ಬಂದರು, ವಾಣಿಜ್ಯ ನೌಕಾ ಚಟುವಟಿಕೆ ತುಂಬಿರುವುದರಿಂದ ೀನುಗಾರಿಕೆಗೆ ಪ್ರತ್ಯೇಕ ಸ್ಥಳ ಕಾದಿರಿಸಲು ಸಾಧ್ಯವಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಸಾಧಾರಣ ಕಳೆದ ಮೂರು ವರ್ಷಗಳಿಂದ ೂರು ಜನ ಮೀನುಗಾರಿಕಾ ಸಚಿವರು ಬಂದಿದ್ದಾರೆ. 10-15 ವರ್ಷಗಳಿಂದ ಹೂಳೆತ್ತುವ ಕೆಲಸ ಾಡಲಿಲ್ಲ. ಪ್ರತಿ ವರ್ಷ ಪ್ರಾಮಿಸ್ ಕೊಡುತ್ತಾರೆ, ಹೋಗುತ್ತಾರೆ. ಮಳೆಗಾಲದಲ್ಲಿ ದೋಣಿಗಳ ಪಘಾತಗಳು ಆಗುತ್ತಿವೆ. ಮೀನುಗಾರರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಸೌತ್‌ಬ್ರೇಕ್ ವಾಟರ್‌ನಲ್ಲಿ ಸ ಶುರು ಮಾಡಿಲ್ಲ, ನಾರ್ತ್‌ಬ್ರೇಕ್ ವಾಟರ್‌ನಲ್ಲಿ ಕೆಲಸ ಶುರು ಮಾಡಲಿಲ್ಲ. ಒಂದು ಕಡೆ ಹೂಳು ಖರಣೆ ಆಗಿ ದೋಣಿಗಳ ಅಪಘಾತಗಳು ಆಗುತ್ತಿವೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರಿಕೆಯಿಂದ ಸುಮಾರು 58 ಕೋಟಿ ವಿದೇಶಿ ವಿನಿಮಯ ಆಗುತ್ತಿದೆ. ಆದರೆ ೀನುಗಾರರಿಗೆ ಬೇಕಾದಂಥ ಸವಲತ್ತುಗಳು ಸಾಧಾರಣ 15 ವರ್ಷಗಳಿಂದ ಪೂರ್ಣಗೊಳ್ಳದೆ ಗುದಿಗೆ ಬಿದ್ದಿದೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಇದ್ದಾರೆ. ಅವರಿಗೆ ಇದರ ಬಗ್ಗೆ ಪೂರ್ಣವಾದ ಅನುಭವವಿದೆ. ಮೊದಲಿನವರು ಬರುತ್ತಾರೆ ಹೋಗುತ್ತಾರೆ ಹೊರತು ಕೆಲಸ ಮಾತ್ರ ಲಿಲ್ಲ. ಮಳೆಗಾಲದಲ್ಲಿ ಒಂದು ಸಲ ಮೀಟಿಂಗ್ ಕರೆಯುತ್ತಾರೆ, ಮೀಟಿಂಗ್‌ನಲ್ಲಿ ಆಶ್ವಾಸನೆಯನ್ನು ಡುತ್ತಾರೆ. ಆದರೆ ಅದು ಜಾರಿ ಆಗಿಲ್ಲ. ಇದಕ್ಕಿಂತ ಗಹನವಾದ ವಿಷಯ ಬೇರೆ ಇಲ್ಲ. ತಾವು ರ ಬಗ್ಗೆ ದಯವಿಟ್ಟು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ:– ರಾಜ್ಯದ ಹೆಚ್ಚಿನ ಬಂದರುಗಳಲ್ಲಿ ಅಳಿವೆ ದ್ವಾರಗಳಲ್ಲಿ ಹೂಳು

ತುಂಬಿ ನೌಕಾಚಲನೆಗೆ ಧಕ್ಕೆಯುಂಟಾಗಿದೆ. ಈ ಮೂಲಕ ಅಪಘಾತಗಳು ಸಂಭವಿಸುತ್ತವೆ. ಇದನ್ನು ಗಮನಿಸಿ ಸರ್ಕಾರವು ಹಳೆಯ ಮಂಗಳೂರು ಬಂದರಿನಲ್ಲಿ ಅಳಿವೆ ದ್ವಾರದಲ್ಲಿ ಹಿಂದೆ ಹೂಳೆತ್ತುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಆದರೆ ಹೂಳೆತ್ತುವ ಯಂತ್ರಗಳು ಸಕಾಲದಲ್ಲಿ ಸಿಗದ ಕಾರಣ ಹೂಳೆತ್ತುವ ಕಾರ್ಯಕ್ರಮ ನಡೆಯಲಿಲ್ಲ. ಆಲ್ಲಿ ಅಡೆತಡೆ ಗೋಡೆ ಕೆಲಸ ಮಾಡಿಸುವುದು ಮತ್ತೆ ಹೂಳೆತ್ತುವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಶಾಸಕರು ಮತ್ತು ಅಧಿಕಾರಿಗಳು ಸಭೆ ಸೇರಿ ನಿರ್ಧರಿಸಲಾಗಿದೆ. ಅಡೆತಡೆ ಗೋಡೆ ರಚನೆ ಸ್ಥಗಿತಗೊಂಡಿದ್ದರಿಂದ ಹೂಳೆತ್ತುವ ಕೆಲಸ ಕೈಗೊಳ್ಳಲಿಕ್ಕೆ ಆಗಲಿಲ್ಲ. ದಕ್ಷಿಣ ಭಾಗದಲ್ಲಿ 40 ಪರ್ಸೆಂಟ್ ಅಡೆತಡೆ ಗೋಡೆ ಕೆಲಸ ಆಗಿದೆ. ಉತ್ತರ ಭಾಗದಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆ ನಮ್ಮ ರಾಜ್ಯದಲ್ಲಿ ಕಂಟ್ರಾಕ್ಟರುಗಳ ತೊಂದರೆಯಿಂದ ಸ್ಥಗಿತಗೊಂಡಿದೆ. ಇದರ ಬಗ್ಗೆ ನಿರ್ಧಾರ ತೆಗೆದುಕೊಂಡು ಉತ್ತರ ಭಾಗದಲ್ಲಿ ಕೆಲಸ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಮಳೆಗಾಲದ ಸಂದರ್ಭದಲ್ಲಿ ಆಗುವ ಅವಘಡದ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ.

ಅದಕ್ಕೋಸ್ಕರ ನವಮಂಗಳೂರು ಬಂದರಿನಲ್ಲಿ ಮಳೆಗಾಲದ ಸಂದರ್ಭದಲ್ಲಿ ಮೀನುಗಾರಿಕೆ ಮಾಡಲಿಕ್ಕೆ ಅವಕಾಶ ಮಾಡಿಕೊಂಡಿದ್ದೇವೆ. ಅದೇ ರೀತಿ ನವಮಂಗಳೂರು ಬಂದರಿನಲ್ಲಿ ಒಂದು ಡ್ರೆಡ್ಜಿಂಗ್ ಜೆಟ್ಟನ್ನು ನಿರ್ಮಾಣ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಒಂದು ಯೋಜನೆ ತರಿಸಿ ಆ ಯೋಜನೆಯನ್ನು ಪ್ರಾರಂಭಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ:– ಕಳೆದ ಮೂರು ವರ್ಷಗಳಿಂದ ಆಶ್ವಾಸನೆ ಬರುತ್ತಿದೆಯೇ ಹೊರತು ಡ್ರೆಡ್ಜಿಂಗ್ ಕೆಲಸ ಆಗುತ್ತಿಲ್ಲ. ನಮ್ಮ ಪಕ್ಕದ ರಾಜ್ಯವಾದ ಕೇರಳ ರಾಜ್ಯದಲ್ಲಿ ಬೇಕಾದಷ್ಟು ಡ್ರೆಡ್ಜಿಂಗ್ ಕೆಲಸ ಆಗುತ್ತಿದೆ. ಅಲ್ಲಿ ಯಾವುದೇ ತೊಂದರೆಯಾಗುತ್ತಿಲ್ಲ. ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರ ಹತ್ತಿರ ಕಳೆದ ಸಲ ಒಂದು ಡ್ರೆಡ್ಜಿಂಗ್ ಜೆಟ್ಟನ್ನು ತರಿಸಿದ್ದೇವೆ. ಅದೇ ರೀತಿ ಡ್ರೆಡ್ಜಿಂಗ್ ಜೆಟ್‌ನ್ನು ಪರ್ಚೇಸ್ ಮಾಡುವ ವ್ಯವಸ್ಥೆ ಮಾಡಬೇಕು. ಸರ್ಕಾರದಲ್ಲಿ ಬೇಕಾದಷ್ಟು ಹಣ ಇದೆ. ಹೊಸದಾಗಿ ಡ್ರೆಡ್ಜಿಂಗ್ ಜೆಟ್ ಪರ್ಚೇಸ್ ಮಾಡುತ್ತೇವೆಂದು ಹೇಳುತ್ತಾರೆ. ಪ್ರತಿ ವರ್ಷ ಮುಂದಿನ ವರ್ಷ ಬರುತ್ತದೆ, ಅಂತ ಮೂರು ವರ್ಷಗಳಿಂದ ಮೂರು ಜನ ಮಂತ್ರಿಗಳು ಹೇಳಿದರು, ಆದರೆ ಇಷ್ಟರವರೆಗೆ ಡ್ರೆಡ್ಜಿಂಗ್ ಜೆಟ್ ಬಂದಿಲ್ಲ. ಮೀನುಗಾರರು ಬಹಳ ವ್ಯಥೆಯಲ್ಲಿದ್ದಾರೆ. ಈವೊಂದು ಸಮಸ್ಯೆಯನ್ನು ಖಂಡಿತವಾಗಿಯೂ ಸರಿ ಮಾಡಬೇಕು. ನವಮಂಗಳೂರು ಬಂದರಿನಲ್ಲಿ ಮತ್ತು ಪಣಂಬೂರಿನಲ್ಲಿ ನಿರ್ವಸಿತರಿಗೆ ಮೀನುಗಾರಿಕೆ ಜೆಟ್ಟಿಂಗ್ ಪ್ರಾರಂಭ ಮಾಡುತ್ತೇವೆಂದು 1972ರಲ್ಲಿ ಹೇಳಿದ್ದಾರೆ. ಇಷ್ಟರವರೆಗೆ ಮಾಡಲಿಲ್ಲ. ಪಣಂಬೂರು ಕಮರ್ಷಿಯಲ್ ಹಾರ್ಬರ್. ಮಳೆಗಾಲ ಮೂರು ತಿಂಗಳು ಬಿಟ್ಟು ಬಾಕಿ ತಿಂಗಳುಗಳಲ್ಲಿ ಜೆಟ್ಟಿಂಗ್ ಕಾರ್ಯವನ್ನು ಆದಷ್ಟು ಬೇಗ ಪ್ರಾರಂಭ ಮಾಡಬೇಕು.

ಶ್ರೀ ವಸಂತ ವಿ. ಸಾಲಿಯಾನ:– ಮಾನ್ಯ ಸದಸ್ಯರು ಹೇಳುವ ವಿಚಾರ ಬಹಳ ಗಂಭೀರವಾಗಿದೆ. ಅಲ್ಲಿ ಏನಾಗಿದೆ ಅಂದರೆ ಅಡೆತಡೆ ಗೋಡೆ ಸಂಪೂರ್ಣ ಮಾಡದಿದ್ದರೆ ಡ್ರೆಡ್ಜಿಂಗ್ ಮಾಡಲಿಕ್ಕೆ ಅವಕಾಶವಾಗುವುದಿಲ್ಲ. ಡ್ರೆಡ್ಜಿಂಗ್ ಮಾಡಲಿಕ್ಕೆ ಹೋದರೆ ನೇರವಾಗಿ ಮಣ್ಣು ಅಡೆತಡೆ ಗೋಡೆಯ ಮಧ್ಯದಲ್ಲಿ ಬಂದು ಪುನಃ ಮಣ್ಣು ತುಂಬುತ್ತದೆ. ಆದ್ದರಿಂದ ಅಡೆತಡೆ ಗೋಡೆ ಸಂಪೂರ್ಣ ಮಾಡಿ ಅದಕ್ಕೆ ಡ್ರೆಡ್ಜಿಂಗ್ ಮಾಡುವಂತಹ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರು ಮಂಗಳೂರು ಬಂದರಿನಲ್ಲಿ ಒಂದು ಜೆಟ್ಟಿಂಗ್ ವಿಚಾರ ಹೇಳಿದ್ದಾರೆ. ಇದರ ಬಗ್ಗೆ ಕೇಂದ್ರ

ಸರ್ಕಾರದ ಜೊತೆ ಚರ್ಚೆ ಮಾಡಿ ಒಂದು ಯೋಜನೆ ತಯಾರಿಸಿ ನಾವು ಅದಕ್ಕೆ ಕಾರ್ಯಕ್ರಮ ರೂಪಿಸುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ:– ಈ ಹೂಳೆತ್ತುವ ವಿಚಾರವನ್ನು ನಾವು ಕಳೆದ ಏಳು ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಈ ಬಗ್ಗೆ ಆಲ್ಲಿನ ಮೀನುಗಾರರು ಹತ್ತು ದಿವಸಗಳಿಂದ ಧರಣಿ ಮಾಡಿದ್ದಾರೆ, ಮುಷ್ಕರ ಮಾಡಿದ್ದಾರೆ. ಪ್ರತಿವರ್ಷ ಡ್ರೆಡ್ಜನ್ನು ಈ ವರ್ಷ ತರಿಸುತ್ತೇವೆ, ಈ ವರ್ಷ ತರಿಸುತ್ತೇವೆ ಎಂದು ಏಳು ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ಆದರೆ ಇಷ್ಟರವರೆಗೆ ತರಿಸಿಲ್ಲ. ಈಗಲೂ ತರಿಸುತ್ತೇವೆ ಎಂದು ಹೇಳುತ್ತಾರೆ. ಎಷ್ಟು ಸಮಯದಲ್ಲಿ ಅಂತ ಮಾಡುತ್ತೀರಿ ? ಮತ್ತು ಹೂಳು ಎತ್ತದಿರುವುದರಿಂದ ಈ ಏಳು ವರ್ಷಗಳಲ್ಲಿ ಎಷ್ಟು ಜನ ಸತ್ತಿದ್ದಾರೆ ? ಎಷ್ಟು ನೌಕೆಗಳು ಮುಳುಗಿವೆ ? ಎಷ್ಟು ಜನರಿಗೆ ಹಾನಿಯಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ವಸಂತ ವಿ. ಸಾಲಿಯಾನ:– ಮಾನ್ಯ ಸದಸ್ಯರು ಹೇಳಿದ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಈಗ ಏನಾಗಿದೆ ಎಂದರೆ ಅಡೆತಡೆ ಗೋಡೆ ಬಗ್ಗೆ ಕಂಟ್ರಾಕ್ಟೆರ್ಸ್ ಪ್ರಾಬ್ಲಮ್ ಇರುವುದರಿಂದ, ಈಗ ಪುನಃ ಸರ್ಕಾರದ ವತಿಯಿಂದ ಮಂಜೂರಾತಿ ಆಗಬೇಕಾಗುತ್ತದೆ. ಅದು ಈಗ ಸರ್ಕಾರದಲ್ಲಿದೆ. ಅಡೆತಡೆ ಗೋಡೆಯ ಕೆಲಸ ಸಂಪೂರ್ಣವಾಗಿ ಆದ ಮೇಲೆ ಡ್ರೆಡ್ಜಿಂಗ್ ತರಿಸಿ ಮಾಡುವುದಕ್ಕೆ ಹೈಪವರ್ ಕಮಿಟಿಯವರು ನಿರ್ಧಾರಕ್ಕೆ ಬಂದಿದ್ದಾರೆ. ಈಗಾಗಲೇ ಅವರು ಡ್ರೆಡ್ಜಿಂಗ್ ಮಾಡುವ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಅಡೆತಡೆ ಗೋಡೆಯನ್ನು ಸಂಪೂರ್ಣವಾಗಿ ಈ ಸಲ ಮುಗಿಸುವುದಕ್ಕೆ ನಾವು ಬಹಳಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಅದನ್ನು ಮುಗಿಸಿದ ನಂತರವೇ ಡ್ರೆಡ್ಜಿಂಗ್ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಬಳಫಟ್ಟ ಗ್ರಾಮಕ್ಕೆ ಪಶುವೈದ್ಯ ಶಾಲೆಯ ಮಂಜೂರಾತಿ

1728: ಡಾ॥ ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ):–

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರವಣಬೆಳಗೊಳ ತಾಲ್ಲೂಕು ಬಾಗೂರು ಹೋಬಳಿ ಬಳಫಟ್ಟ ಗ್ರಾಮದಲ್ಲಿರುವ ಪಶುವೈದ್ಯ ಶಾಲೆಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಆಲ್ಲಿಯ ಗ್ರಾಮಸ್ಥರು ಕಟ್ಟಡ ನೀಡಿ ಮಂಜೂರಾತಿಗಾಗಿ ಮನವಿಯನ್ನು ಆಗಿಂದಾಗ್ಗೆ ಸಲ್ಲಿಸುತ್ತಿದ್ದರೂ ಮಂಜೂರಾತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸದರಿ ಪಶುವೈದ್ಯ ಶಾಲೆಗಾಗಿ ಮಂಜೂರಾತಿ ನೀಡಿ ಖಾಯಂ ವೈದ್ಯರನ್ನು ನೇಮಕ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ) ಇಲ್ಲ.

ಆ) ಹೌದು.

ಇ) 1992-93ನೇ ಸಾಲಿನಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಸ್ಥಳಗಳನ್ನು ಆಯ್ಕೆ ಮಾಡಲಾಗುತ್ತಿದೆ. ಆ ಸಮಯದಲ್ಲಿ ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಕ್ಕೆ ಮಂಜೂರಾತಿ ನೀಡುವ ವಿಷಯವನ್ನು ಪರಿಶೀಲಿಸಲಾಗುವುದು.